# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 2 | ಪಿಡಬ್ಲ್ಯೂ | 2 |

ಸಾಕ್ಷಿದಾರರ ಹೆಸರು : ದಾಸರ ಶಿವರಾಜ

ತಂದೆಯ ಹೆಸರು : ಮಂಜಪ್ಪ

ವಯಸ್ಸು : 33 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 27.03.2025

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ದುರ್ಗಾವತಿ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲಾ. ನನಗೆ ಆರೋಪಿತರ ಪರಿಚಯ ಇರುವುದಿಲ್ಲಾ. ಈಗ್ಗೆ 1 ವರ್ಷದ ಹಿಂದೆ ನಾನು ದುರ್ಗಾವತಿ ಬಸ್ಸ ನಿಲ್ದಾಣದ ಹತ್ತಿರ ಹೋಗುತ್ತಿರುವಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಮಹಜರ ಆಗಿದ್ದು ಅದನ್ನು ಈಗಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು.. ನಕಾಶೆಯನ್ನು ನಿ ಪಿ 3 ಎಂದು ಗುರುತಿಸಲಾಗಿದೆ, ಸಾಕ್ಷಿ ಸಹಿಯನ್ನು ನಿ ಪಿ 3(ಬಿ) ಎಂದು ಗುರುತಿಸಲಾಯಿತು. ನಿ ಪಿ 2 ಮತ್ತು ನಿ ಪಿ 3 ರಲ್ಲಿ ಏನ ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಆ ದಿನ ಸ್ಥಳದಲ್ಲಿ ಪೋಲೀಸರು ಒಂದು ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**<u>ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>**

ದಿನಾಂಕ 16.02.2023 ರಂದು ದುರ್ಗಾವತಿ ಗ್ರಾಮದ ಬಸ್ಸ್ ನಿಲ್ದಾಣದ ಬಳಿ ಹರಪನಹಳ್ಳಿ ಹರಿಹರ ಮುಖ್ಯ ರಸ್ತೆಯಲ್ಲಿ ನನ್ನ ಮತ್ತು ಚಾ ಸಾ 3 ರವರ ಸಮಕ್ಷಮ ಚಾ ಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾ ಸಾ 13 ರವರು ಸಂಜೆ 5 ರಿಂದ 6 ಗಂಟೆಯವರೆಗೆ ನಿ ಪಿ 2 ಮತ್ತು 3 ರಂತೆ ಕೃತ್ಯ ಸ್ಥಳದ ಪಂಚನಾಮೆ ಹಾಗೂ ಕಚ್ಚಾ ನಕಾಶೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸ್ಥಳದಲ್ಲಿ ನಾನು ಇರುವಂತಹ ಫೋಟೋ ತೆಗೆದಿರುತ್ತಾರೆ ಎಂದರೆ ಗೊತ್ತಿಲ್ಲಾ. ನಿ ಪಿ 2 ಮತ್ತು 3 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲಾ</u>**

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 5 | ಪಿಡಬ್ಲ್ಯೂ | 3 |

ಸಾಕ್ಷಿದಾರರ ಹೆಸರು : ನಾಗರಾಜ

ತಂದೆಯ ಹೆಸರು : ಸಂಗಪ್ಪ

ವಯಸ್ಸು : 37 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 27.03.2025

ಉದ್ಯೋಗ : ಕೂಲಿ

ವಾಸ ಸ್ಥಳ : ದುಗ್ಗಾವತಿ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲಾ. ನನಗೆ ಆರೋಪಿತರ ಪರಿಚಯ ಇರುವುದಿಲ್ಲಾ. ಈಗ್ಗೆ 1 ವರ್ಷದ ಹಿಂದೆ ನಾನು ದುಗ್ಗಾವತಿ ಬಸ್ಸ ನಿಲ್ದಾಣದ ಹತ್ತಿರ ಹೋಗುತ್ತಿರುವಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ವಾಹನ ಜಪ್ತು ಮಹಜರ ಆಗಿದ್ದು ಅದನ್ನು ಈಗಗಾಗಲೇ ನಿ ಪಿ 4 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ ಪಿ 4(ಬಿ) ಎಂದು ಗುರುತಿಸಲಾಯಿತು.. ನಿ ಪಿ 4 ರಲ್ಲಿ ಏನ ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಆ ದಿನ ಸ್ಥಳದಲ್ಲಿ ಪೋಲೀಸರು ಎರಡು ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 15.05.2023 ರಂದು ಹಲವಾಗಲು ಪೋಲೀಸ ಠಾಣೆ ಆವರಣದಲ್ಲಿ ನನ್ನ ಮತ್ತು ಚಾ ಸಾ 4 ರವರ ಸಮಕ್ಷಮ ಚಾ ಸಾ 14 ರವರು ಮಧ್ಯಾಹ್ನ 12 ರಿಂದ 1.30

ಗಂಟೆಯವರೆಗೆ ನಿ ಪಿ 4 ರ ವಾಹನ ಜಪ್ತು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸ್ಥಳದಲ್ಲಿ ನಾನು ಇರುವಂತಹ 2 ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಗೊತ್ತಿಲ್ಲಾ. ಆ ಸಮಯದಲ್ಲಿ ಕೆ ಎ 35 ಎಸ್ 11620 ಮೋಟರ್ ಸೈಕಲನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲಾ. ನಿ ಪಿ 4 ರಲ್ಲಿ ಬರೆದಿರುವ ವಿಚಾರಗಳು ಎಲ್ಲಾ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ</u>**

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.